ನೀ.ಹ. ರವಿಕುಮಾರ

# ಕವಿ, ಚಿಂತಕ ಕೆ.ಬಿ. ಸಿದ್ಧಯ್ಯ

# ‘ಕಣ್ಣಿಲ್ಲದವರು ಕಣ್ಣು ಧರಿಸಿ ಕಾಣಿರೋ!’

ಈ ನಾಡ ಮಣ್ಣಿನಲ್ಲಿ
ಮಣ್ಣಾದ ಜನಗಳ ಕತೆಯ
ಕತೆಯೊಂದು ಹೇಳುತ್ತೇನೆ
ಕಿವಿಗೊಟ್ಟು ಕೇಳಿರಣ್ಣ...

**ಇತ್ತೀಚೆಗೆ ನಿಧನರಾದ ಕವಿ ಕೆ.ಬಿ. ಸಿದ್ಧಯ್ಯ (4–3–1954 – 18–10–2019) ಅವರ ಕಾವ್ಯ, ಚಿಂತನೆಯನ್ನು ಪರಿಚಯಿಸುವ ಬರಹ ಇಲ್ಲಿದೆ.**

ಈ ಹಾಡಿನ ಮೂಲಕ ಬೆಲ್ಚಿ ಘಟನೆಯನ್ನು ಮತ್ತು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ದಾಸನಪುರದಲ್ಲಿ ದಲಿತರ ಮೇಲೆ ನಡೆದ ದಬ್ಬಾಳಿಕೆಯನ್ನು ನೇರವಾದ ನಿಷ್ಠುರವಾದ ಮಾತುಗಳಿಂದ ಖಂಡಿಸಿ ಕ್ರಾಂತಿಯ ಅಲೆಗಳನ್ನೆಬ್ಬಿಸಿದವರು ಕೆ.ಬಿ. ಸಿದ್ಧಯ್ಯ. ಈ ಹಾಡಿನ ಕೊನೆಯಲ್ಲಿ ‘ಗುಡುಗಾಗಿ ಗುಡುಗಬೇಕು’, ‘ಮಾನವರಾಗಬೇಕು’ ಎಂದು ಹೇಳುವುದರ ಮೂಲಕ ದಮನಿತರು ಸಮೂಹ ಶಕ್ತಿಯಾಗಿ ಒಗ್ಗೂಡಬೇಕಾದ, ಶೋಷಣೆಯ ವಿರುದ್ಧ ನಿಲ್ಲಬೇಕಾದ ಆಶಯವನ್ನು ವ್ಯಕ್ತಪಡಿಸಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಂಕೆರೆ ಗ್ರಾಮದ ಬೈಲಪ್ಪ ಮತ್ತು ಅಂತೂರಮ್ಮನವರ ಮಗನಾಗಿ ಜನಿಸಿದ ಕೆ.ಬಿ. ಸಿದ್ಧಯ್ಯನವರು ಸಾಹಿತ್ಯಕ್ಕೆ ಕಾಲಿಟ್ಟದ್ದೆ ಸಂಘಟನೆ ಮತ್ತು ಹೋರಾಟದ ಮೂಲಕ. ಮುಂದೆ ದಲಿತ ಸಂವೇದನೆಯ ಪ್ರಮುಖ ಬರಹಗಾರರಾಗಿ ಸಾಹಿತ್ಯ, ಸಂಘಟನೆ ಮತ್ತು ಹೋರಾಟಗಳನ್ನು ಬೇರೆಬೇರೆಯಾಗಿ ನೋಡದೆ ಇವುಗಳ ಒಡನಾಟದಲ್ಲಿ ತಮ್ಮ ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವರು.

ಆರಂಭದ ‘ಬಕಾಲ’ ಕಾವ್ಯವೇ ಇವರ ಕಾವ್ಯದ ಹಾದಿಯನ್ನು ಸ್ಪಷ್ಟಗೊಳಿಸಿತ್ತು. ಜಾನಪದ ಪುರಾಣವನ್ನು ಆಧುನಿಕ ಭಿತ್ತಿಯಲ್ಲಿ ಅಭಿವ್ಯಕ್ತಿಸಿದ ರೀತಿ ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ‘ಬಕಾಲಮುನಿ’

